ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 30/1/2020

# ಕೇರಳ ಕಲಾಪದಲ್ಲಿ ಹೈಡ್ರಾಮ

ತಿರುವನಂತಪುರ: ಕೇರಳ ವಿಧಾನಮಂಡಲ ಅಧಿವೇಶನದಲ್ಲಿ ಬುಧವಾರ ನಾಟಕೀಯ ಬೆಳವಣಿಗೆ ನಡೆಯಿತು. ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡಲು ಆಗಮಿಸಿದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಸಿದ ಸರ್ಕಾರದ ನಿಲುವನ್ನು ಆಕ್ಷೇಪಿಸಿದರು. ಆದರೆ, ಈ ಭಾಷಣ ಸರ್ಕಾರದ ನೀತಿ-ನಿಲುವಾದ ಕಾರಣ ಮತ್ತು ಸಿಎಎ ಕುರಿತ ಪ್ಯಾರಾವನ್ನು ನಾನು ಓದಬೇಕು ಎಂಬುದು ಮುಖ್ಯಮಂತ್ರಿಗಳ ಇಚ್ಛೆಯಾಗಿರುವುದರಿಂದ ಇದನ್ನು ಓದುವುದಾಗಿ ಹೇಳಿದರು. ಕಲಾಪಕ್ಕೆ ಬಂದ ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಕ್ಕೂಟದ ಶಾಸಕರು 'ಗೋ ಬ್ಯಾಕ್ ಗವರ್ನರ್' ಎಂದು ಘೋಷಣೆ ಕೂಗಿದರು. ಇದಕ್ಕೆ ಮುಗುಳ್ನಗುತ್ತಲೇ ಪ್ರತಿಕ್ರಿಯಿಸಿದ ರಾಜ್ಯಪಾಲ ಖಾನ್, 'ಧನ್ಯವಾದ' ಎಂದರು.